## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ
## ಘನ ನ್ಯಾಯಾಲಯದಲ್ಲಿ

### ಪ್ರಕರಣ ಸಂಖ್ಯೆಃ ಸ್ಪೆಷಲ್ ಕೇಸ್ 70/2019

ದಿನಾಂಕಃ 03.07.2024
(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)

ಪ್ರಾ.ಸಾಃ 3 (ಚಾ.ಸಾ. 3)

| | | |
|---|---|---|
| ಹೆಸರು | ಃ | ಎಂ.ಗೋಪಾಲ |
| ತಂದೆಯ ಹೆಸರು | ಃ | ಮುನಿಯಯ್ಯ |
| ವಯಸ್ಸು | ಃ | 55 ವರ್ಷ |
| ಉದ್ಯೋಗ | ಃ | ವೈರಲೆಸ್ ಆಪರೇಟರ್, ಸಾತನೂರು ವಲಯ |
| ವಾಸ ಸ್ಥಳ | ಃ | ಸಾತನೂರು |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಅಭಿಯೋಜಕರಿಂದಃ

2012 ರಿಂದ ಇಲ್ಲಿಯವರೆಗೂ ವಲಯ ಅರಣ್ಯ ಅಧಿಕಾರಿಗಳ ಕಛೇರಿ ಸಾತನೂರು ಇಲ್ಲಿ ವೈರಲೆಸ್ ಆಪರೇಟರ್ ಆಗಿ ನಾನು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ16.12.2016 ರಂದು ಕನಕಪುರ ತಾಲ್ಲೂಕು, ಸಾತನೂರು ಹೋಬಳಿ, ಕಂಚನಹಳ್ಳಿ ಗ್ರಾಮದ ಸರ್ವೆ ನಂ. 118 ರ ಭತ್ತದ ಗದ್ದೆಯಲ್ಲಿ ಒಂದು ಗಂಡಾನೆಯು ವಿದ್ಯುತ್‌ನ್ನು ಅಕ್ರಮವಾಗಿ ಹರಿಸಿದ್ದರಿಂದ ಸತ್ತು ಬಿದ್ದಿತ್ತು. ಭತ್ತದ ಗದ್ದೆಯ ಸುತ್ತ ವಿದ್ಯುತ್ ಕಂಬದಿಂದ ವೈರನ್ನು ಎಳೆದು ಜಿಂಕ್ ವೈರ್ ಗೆ ಅಳವಡಿಸಿದ್ದು, ಆ ಜಿಂಕ್ ವೈರನ್ನು ಆನೆಯು ಸೊಂಡಿಲಿನಿಂದ ಮುಟ್ಟಿದ್ದಾಗ ಆನೆಯ ಸೊಂಡಿಲಿನ ಭಾಗ ಕೂಯ್ದಂತಹ ರೀತಿಯಲ್ಲಿ ಇತ್ತು. ಈ ಕಾರಣಕ್ಕೆ ಆನೆಯು ಮೃತಪಟ್ಟಿರುತ್ತೆ.

3. ಆ ಬಗ್ಗೆ ದಿಃ28.12.2016 ರಂದು ಸಾತನೂರು ಪೊಲೀಸ್ ಠಾಣೆಯಲ್ಲಿ ಅರಣ್ಯ ರಕ್ಷಕರಾದ ವಿ.ಪಿ. ಕುಮಾರ್ ರವರು ಸರ್ವೆ ನಂ. 118 ರ ಭತ್ತದ ಗದ್ದೆಯ ಜಮೀನಿನಲ್ಲಿ ಆನೆ ಮೃತ ಪಟ್ಟಿರುವ ಬಗ್ಗೆ ದೂರನ್ನು ನೀಡಿರುತ್ತಾರೆ. ಠಾಣಾಧಿಕಾರಿಗಳು ನಮ್ಮಗಳನ್ನು ಸ್ಥಳಕ್ಕೆ ಬರಮಾಡಿಕೊಂಡು ಸದರಿ ಸ್ಥಳವನ್ನು

ಪರಿಶೀಲಿಸಿ ನೋಡಲಾಗಿ ಸರ್ವೆ ನಂ. 118 ರ ಜಮೀನಿನ ಪಶ್ಚಿಮ ದಿಕ್ಕಿನಲ್ಲಿ ಆನೆ ಸತ್ತು ಬಿದ್ದಿರುವುದನ್ನು ಖಚಿತ ಪಡಿಸಿಕೊಂಡಿದ್ದು. ಆ ಜಮೀನು ನಾಗೇಶ್ ರವರ ತಾತ ಮಾದೇಗೌಡರ ಜಮೀನಾಗಿದ್ದು, ಅದನ್ನು ನಾಗೇಶ್ ರವರು ಸಾಗುವಳಿ ಮಾಡುತ್ತಿದ್ದರು. ಠಾಣಾಧಿಕಾರಿಯವರು ಸ್ಥಳದಲ್ಲಿ ಪಂಚರ ಸಮಕ್ಷಮದಲ್ಲಿ ಅದೇ ದಿವಸ ಮಹಜರ್ ನ್ನು ಮಾಡಿದರು. ಆ ಮಹಜರ್ ಸಮಯದಲ್ಲಿ ನಾನು, ಅರಣ್ಯ ರಕ್ಷಕ ಕುಮಾರ್, ವನ ಪಾಲಕರಾದ ರಾಜು.ಎಂ ಸ್ಥಳದಲ್ಲಿ ಇದ್ದೆವು. ಆ ಮಹಜರನ್ನು ಮತ್ತು ಸಾಕ್ಷಿಯ ರುಜುವನ್ನು ನಿಪಿ.6 ಮತ್ತು 6(ಎ) ಎಂದು ಗುರುತಿಸಲಾಯಿತು. ಆ ಮಹಜರನ್ನು ಸ್ಥಳದಲ್ಲಿ ಮಧ್ಯಾಹ್ನ 12.30 ಕ್ಕೆ ಪ್ರಾರಂಭಿಸಿ 01.00 ಗಂಟೆಗೆ ಮಾಡಿರುತ್ತಾರೆ. ಸ್ಥಳದಲ್ಲಿ ಜಿಂಕ್ ವೈರನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಸಾಕ್ಷಿಗೆ ನ್ಯಾಯಾಲಯದ ಮುಂದೆ ಇರುವ ಜಿಂಕ್ ವೈರನ್ನು ತೋರಿಸಲಾಗಿ ಅದೇ ವೈರು ಎಂದು ಗುರುತಿಸಿದ್ದಾರೆ. ಆ ವೈರನ್ನು ಮುದ್ದೆ ಮಾಲು 1 ಎಂದು ಗುರುತಿಸಲಾಯಿತು.

4. ಸಾಕ್ಷಿಗೆ 2 ಫೋಟೋಗಳನ್ನು ತೋರಿಸಲಾಗಿದ್ದು, ಫೋಟೋಗಳಲ್ಲಿ ತೋರಿಸಿದ ಸ್ಥಳದಲ್ಲಿಯೇ ಆನೆಯು ಮೃತ ಪಟ್ಟಿರುವುದಾಗಿ ಗುರುತಿಸಿದ್ದಾರೆ. ಆ 2 ಫೋಟೋಗಳನ್ನು ನಿಪಿ 7 ಮತ್ತು 8 ಎಂದು ಗುರುತಿಸಲಾಯಿತು. ಆನೆಗೆ ವಿದ್ಯುತ್ ತಗುಲಿ ಗ್ರೌಂಡ್ ಆಗಿ ಸತ್ತಿತ್ತು. ಈ ಬಗ್ಗೆ ನಾನು ಠಾಣಾಧಿಕಾರಿಗಳ ಮುಂದೆ ಹೇಳಿಕೆಯನ್ನು ಕೊಟ್ಟಿದ್ದೇನೆ.

ಪಾಟಿ ಸವಾಲುಃ ಆರೋಪಿ ಪರ ಶ್ರೀ.ಬಿ.ಸಿ.ವಿ ವಕೀಲರಿಂದಃ

5. ದಿಃ16.12.2016 ರಂದು ನನಗೆ ಆನೆ ಸತ್ತ ವಿಷಯ ಗೊತ್ತಾದ ನಂತರ ಸ್ಥಳಕ್ಕೆ ಹೋಗಿದ್ದೆನು. ಆ ದಿವಸ ಸ್ಥಳಕ್ಕೆ ಎ.ಸಿ.ಎಫ್., ಆರ್.ಎಫ್.ಓ. ರವರುಗಳು ಬಂದಿದ್ದರು. ನಮ್ಮ ಅಧಿಕಾರಿಗಳು ಆ ಜಮೀನು ಯಾರಿಗೆ ಸೇರಿದ್ದು ಎಂದು ಸ್ಥಳೀಯರನ್ನು ಕರೆಯಿಸಿ, ವಿಚಾರಣೆ ಮಾಡಿದ್ದರು. ಈ ಬಗ್ಗೆ ಸ್ಥಳೀಯರ ಹೇಳಿಕೆಯನ್ನು ತೆಗೆದುಕೊಂಡಿಲ್ಲ. ನಮ್ಮ ಅಧಿಕಾರಿಗಳು ಆ ಜಮೀನಿಗೆ ಸಂಬಂಧಪಟ್ಟ ಆರ್.ಟಿ.ಸಿ. ತೆಗೆದುಕೊಂಡಿದ್ದಾರೆ. ಚಾರ್ಜ್ ಶೀಟ್ ಪ್ರಕಾರ ನಾಗೇಶನ

ತಂದೆ ಹೆಸರು ಚಿಕ್ಕಮಾದೇಗೌಡ ಎಂದರೆ ಸರಿ. ಅವರನ್ನು ಮಾದೇಗೌಡ ಎಂದು ಕೂಡ ಕರೆಯುತ್ತಾರೆ.

6. ನನ್ನ ಹೇಳಿಕೆಯಲ್ಲಿ ಆರೋಪಿಯ ತಂದೆಯ ಹೆಸರು ಚಿಕ್ಕಮಾದೇಗೌಡ ಉ. ಮಾದೇಗೌಡ ಎಂದು ನಾನು ಹೇಳಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಕಡತದಲ್ಲಿರುವ ಒಂದು ಆರ್.ಟಿ.ಸಿ.ಯನ್ನು ತೋರಿಸಲಾಗಿ ಅದರಲ್ಲಿ ಮಾದೇಗೌಡ ಬಿನ್ ಜವರಾಯಿಗೌಡ ರವರ ಹೆಸರಿನಲ್ಲಿ 4 ಎಕರೆ 23 ಗುಂಟೆ, ಹೊನ್ನೇಗೌಡ ಬಿನ್ ತಿಮ್ಮೇಗೌಡ ರವರ ಹೆಸರಿನಲ್ಲಿ 3 ಎಕರೆ ಜಮೀನು ಎಂದು ನಮೂದಿಸಲಾಗಿದೆ ಎಂದರೆ ಸರಿ. ಆ ಆರ್.ಟಿ.ಸಿ.ಯಲ್ಲಿ ನಾಗೇಶನ ಹೆಸರಾಗಲೀ, ಅವರ ತಂದೆ ಚಿಕ್ಕಮಾದೇಗೌಡನ ಹೆಸರಾಗಲೀ ಇಲ್ಲ ಎಂದರೆ ಸರಿ. ಆ ಆರ್.ಟಿ.ಸಿ.ಯಲ್ಲಿ ಯಾವುದೇ ಬೆಳೆಯನ್ನು ನಮೂದಿಸಿಲ್ಲ ಎಂದರೆ ಸರಿ. ಆದರೆ ನಾವುಗಳು ಆ ಜಮೀನಿಗೆ ಹೋದಾಗ ಭತ್ತದ ಬೆಳೆಯನ್ನು ಕಟ್ಟಾವು ಮಾಡಿದ್ದು, ಅದು ಅಲ್ಲಲ್ಲಿ ಇತ್ತು.

7. ನಮ್ಮ ಇಲಾಖೆಯವರು ಕ್ಯಾಮೆರಾದಲ್ಲಿ ಆನೆಯ ಫೋಟೋವನ್ನು ತೆಗೆದಿದ್ದಾರೆ. ನಿಪಿ.7 ಮತ್ತು 8 ರಲ್ಲಿ ಜಿಂಕ್ ವೈರ್ ಆನೆ ಸುತ್ತಿಕೊಂಡಿರುವ ಬಗ್ಗೆ ಆಗಲೀ ಅಥವಾ ಜಿಂಕ್ ವೈರ್ ಸ್ಥಳದಲ್ಲಿ ಕಾಣಿಸುತ್ತಿಲ್ಲ ಎಂದರೆ ಸರಿ. ಆ ಫೋಟೋಗಳಲ್ಲಿ ಅಕ್ರಮವಾಗಿ ವಿದ್ಯುತ್ ಕಂಬದಿಂದ ವಿದ್ಯುತ್ ಸಂಪರ್ಕವನ್ನು ಜಿಂಕ್ ವೈರ್ ಗೆ ಕೊಟ್ಟಿದ್ದರು ಎಂದು ಕಾಣಿಸುತ್ತಿಲ್ಲ ಎಂದರೆ ಸರಿ.

8. ನಾನು ದಿ:16.12.2016 ರಂದು ಸ್ಥಳಕ್ಕೆ ಭೇಟಿ ಕೊಟ್ಟಾಗ ಸ್ಥಳದಲ್ಲಿ ಜಿಂಕ್ ವೈರ್ ಇತ್ತು. ಆ ದಿವಸ ಅದನ್ನು ವಶಪಡಿಸಿಕೊಂಡಿಲ್ಲ, ಜಮೀನಿನಲ್ಲೆಯೇ ಬಿಟ್ಟಿದ್ದೆವು. ಆನೆ ಸತ್ತ ಜಾಗಕ್ಕೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಕೆ.ಇ.ಬಿ.ಯವರ ಅಜಾಗೃಕತೆಯಿಂದ ಮೇನ್ ವೈರ್ ಕಟ್ಟಾಗಿದ್ದು, ಅದು ಆನೆಗೆ ತಗುಲಿ ಅದರಿಂದ ಆನೆ ಸತ್ತಿದೆ ಎಂದರೆ ಸರಿಯಲ್ಲ. ಆ ಘಟನೆಯು ಕೆ.ಇ.ಬಿ.ಯವರ ನಿರ್ಲಕ್ಷತನದಿಂದ ಆಗಿದ್ದರೂ ಸಹ ಕೆ.ಇ.ಬಿ. ಅಧಿಕಾರಿಗಳು ಮತ್ತು ನಮ್ಮ ಅಧಿಕಾರಿಗಳು ಜೊತೆಯಲ್ಲಿ ಸಾಮೀಲಾಗಿ ಆರೋಪಿಯ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

9. ಅದಕ್ಕೆ ಪೂರಕವಾಗಿ ಸ್ಥಳದಲ್ಲಿಯೇ ಮಹಜರ್ ಮಾಡಿದ್ದೇವೆ ಎಂದು ವೈರನ್ನು ಸೃಷ್ಟಿ ಮಾಡಿ ಈ ಕೇಸಿಗೋಸ್ಕರ ಅಳವಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಯಾವುದೇ ಸ್ಕೆಚ್ ನ್ನಾಗಲೀ ಸ್ಥಳದಲ್ಲಿ ತಯಾರಿಸಿಲ್ಲ ಎಂದರೆ ಸರಿ. ಮೇನ್ ಲೈನ್‌ನಿಂದ ವಿದ್ಯುತ್ ನ್ನು ಅಕ್ರಮವಾಗಿ ಜಿಂಕ್ ವೈರ್ ಗೆ ಎಳೆದುಕೊಂಡಿರುವ ಬಗ್ಗೆ ಯಾವುದೇ ಫೋಟೋಗಳನ್ನು ತೆಗೆದಿಲ್ಲ ಎಂದರೆ ಸರಿ.

<u>ಮರುವಿಚಾರಣೆಃ ಇಲ್ಲ.</u>

<u>(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).</u>

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಬಿ.ವಿ.ರೇಣುಕಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.

(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆತನನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ ಃ